
# ದೇವಾಲಯ

ಲಕ್ಷ್ಮಣದಾಸ ವೇಲಣಕರ್


ದೇವಾಲಯಗಳು ಹಿಂದೂ ಸಂಸ್ಕೃತಿಯ ಪ್ರತೀಕ. ಅವುಗಳ ಒಂದು ಸ್ಥೂಲಚಿತ್ರ ಮತ್ತು ಪ್ರಾಮುಖ್ಯ ಈ ಲೇಖನದ ವಸ್ತು. ಶ್ರೀ ಲಕ್ಷ್ಮಣ ದಾಸ ವೇಲಣಕರ್ ಅವರು ಬೆಂಗಳೂರಿನವರು ಮತ್ತು ಹರಿಕಥೆಯಲ್ಲಿ ಪ್ರವೀಣರು. ಅದರಲ್ಲಿ ತರಬೇತಿ ನೀಡುವ ಸಂಸ್ಥೆಯೊಂದನ್ನು ನಡೆಸುತ್ತಿರುವರು.



ಒಂದು ಊರು ಎಂದಾದರೆ ಅಲ್ಲೊಂದು ದೇವಾಲಯ ವಿರಬೇಕು. ಸಾಮಾನ್ಯವಾಗಿ ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿಯವರೆಗೆ ನಮ್ಮ ಪವಿತ್ರ ಭಾರತದಲ್ಲಿ ಇರುವ ಸಣ್ಣ-ಪುಟ್ಟ ಹಳ್ಳಿಗಳಿಂದ ಹಿಡಿದು, ಭಾರೀ ದೊಡ್ಡ ದೊಡ್ಡ ನಗರಗಳಲ್ಲಿಯೂ ಒಂದಕ್ಕಿಂತ ಹೆಚ್ಚು ದೇವಾಲಯಗಳಿರುವುದು ಇಂದು ಕೂಡ ಕಂಡು ಬರುತ್ತದೆ. ಅಷ್ಟೇ ಅಲ್ಲ ವಿಶ್ವದಾದ್ಯಂತ ದೇವಾಲಯಗಳು ಇವೆ. ಈ ದೇವಾಲಯ ಮತ್ತು ನಮ್ಮ ಸನಾತನ ಸಂಸ್ಕೃತಿಯ ಸಂಬಂಧವು ಅನ್ಯೋನ್ಯವಾಗಿ ಪುರಾತನ ಕಾಲದಿಂದಲೂ ನಡೆದು ಬಂದಿದೆ. ಅಷ್ಟೇ ಏಕೆ ಸಂಸ್ಕೃತಿಯ ಮುಖ್ಯ ಕೇಂದ್ರವೂ ಒಂದು ಕಾಲದಲ್ಲಿ ದೇವಾಲಯವೇ ಆಗಿತ್ತು. ಭಾರತೀಯ ನೃತ್ಯ, ಸಂಗೀತ, ಶಿಲ್ಪ, ಸ್ಥಾಪತ್ಯ,ಆಗಮಃಶಾಸ್ತ್ರ ಮಂತಾದವೆಲ್ಲವೂ ನೇರವಾಗಿ ದೇವಾಲಯದೊಂದಿಗೆ ಸಂವಾದಿಗಳಾಗಿವೆ. ದೇವಾಲಯಗಳ ಅಧ್ಯಯನದಿಂದ ನಮ್ಮ ಪುರಾತನ ಸಂಸ್ಕೃತಿಯ ಸ್ಪಷ್ಟ ದರ್ಶನವಾಗದಿರಲಾರದು. ಇವು ಕಾಲಾಂತರದಲ್ಲಿ ಮತೀಯ, ಸಂಪ್ರದಾಯಗಳ ಕೇಂದ್ರಗಳೂ ಆಗಿ ಖ್ಯಾತಿಹೊಂದಿದವು. ಹಿಂದಿನ ಕಾಲದಲ್ಲಿ ವಿದ್ಯಾಕೇಂದ್ರವೂ ದೇವಾಲಯಗಳೇ ಆಗಿದ್ದುವು. ಹೀಗೆ ಸಂಸ್ಕೃತಿಯ ಸರ್ವಾಂಗಪೂರ್ಣವಾದ ದೇವಾಲಯಗಳ ಬಗ್ಗೆ ನಾವು ತಿಳಿದಷ್ಟೂ ಕಡಿಮೆಯೇ.

## ದೇವಸ್ಥಾನ

ದೇವರು ಸ್ವಯಂಭುವಾಗಿ ಪ್ರಕಟಗೊಂಡ ಅಥವಾ ಸ್ಥಾಪಿಸಿದ ಸ್ಥಾನಕ್ಕೆ ದೇವಸ್ಥಾನವೆಂದು ಹೇಳುತ್ತಾರೆ. ಮಂದಿರ, ದೇವಾಲಯ ಮತ್ತು ದೇವಸ್ಥಾನ ಈ ಶಬ್ದಗಳು ಇಂದು ಸಮಾನಾರ್ಥದಲ್ಲಿ ಕರೆಸಿಕೊಂಡರೂ ಇದರಲ್ಲಿ ಆಂತರಿಕವಾಗಿ ಬಹಳಷ್ಟು ಭೇದಗಳಿವೆ. ದೇವಸ್ಥಾನವು ದೇವಾಲಯಕ್ಕಿಂತ ಅತಿ ಪ್ರಾಚೀನವಾಗಿದೆ ಎಂದು ಹೇಳುತ್ತಾರೆ. ಆದಿಕಾಲದಲ್ಲಿ ಮನುಷ್ಯರು ಸಾಮೂಹಿಕವಾಗಿ ಒಂದೆಡೆ ನೆಲೆಸಲು ಪ್ರಾರಂಭಿಸಿವಾದಂದಿನಿಂದಲೇ ತಮ್ಮ ವಾಸ ಸ್ಥಾನದ ಬಳಿಯಲ್ಲೇ ತಮ್ಮ ಸಂರಕ್ಷಕ ದೇವತೆಯ ಕಲ್ಪನೆಗೈದು ಅದರ ಆರಾಧನೆ-ಬಲಿದಾನಕ್ಕಾಗಿ ಒಂದು ಜಾಗ ನಿಶ್ಚಯಿಸಿ ಕೊಂಡರು. ಅದೇ ದೇವಸ್ಥಾನವಾಯಿತು. ಪ್ರಾಚೀನ ಕಾಲದಲ್ಲಿ ಈ ದೇವಸ್ಥಾನಗಳು ಊರಿನ ಹೊರಗೆ ಒಂದು ಮರದ ಬುಡದಲ್ಲೋ, ಗುಹೆಯಲ್ಲೋ, ಬಯಲು ಜಾಗದಲ್ಲೋ ಇರುತ್ತಿದ್ದುವು. ಕ್ವಚಿತ್ತಾಗಿ ಕೆಲವೆಡೆ ಅದರ ಸುತ್ತಲೂ ಗೋಡೆಯೋ, ಮೇಲೊಂದು ಮಾಡೋ ಇರುತ್ತಿತ್ತು. ಈ ಸ್ಥಿತಿಯು ಇಂದೂ ಕೂಡ ಅನೇಕ



ಸ್ಥಳಗಳಲ್ಲಿ ಕಂಡುಬರುತ್ತದೆ.

ರಾಮಾಯಣದ ಅರಣ್ಯಕಾಂಡದಲ್ಲಿ ಅಗಸ್ತ್ಯಾಶ್ರಮದ ವರ್ಣನೆ ಮಾಡುವಾಗ ಅಲ್ಲಿ ಬ್ರಹ್ಮ, ವಿಷ್ಣು, ರುದ್ರ ಮುಂತಾದ ದೇವತೆಗಳ ಸ್ಥಾನಗಳು ಇದ್ದುವು ಎಂದು ಹೇಳಿದೆ (೧೨. ೧೭,೨೧) . ಇದರಿಂದ ಅಂದಿನಿಂದಲೂ (ಸುಮಾರು ಐದು ಸಾವಿರ ವರ್ಷಗಳ ಹಿಂದೆ). ಊರಿನ ಜನರು ಊರ ಹೊರಗೆ ದೇವರ ಹೆಸರಿನಿಂದ ಕೆಲವು ಜಾಗವನ್ನು ಕಾದಿರಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ.

ಹರ್ಷಚರಿತ್ರೆಯಲ್ಲಿ ಚಂಡಿಕಾಕುಂಜ, ಚಾಮುಂಡಾ ಮಂಟಪ ಇತ್ಯಾದಿ ಹೆಸರುಗಳು ಕಂಡುಬರುತ್ತವೆ. ಇದರಿಂದ ಆಗಲೂ ದೇವಸ್ಥಾನಗಳಿದ್ದುವು ಎಂಬುದು ಸ್ಪಷ್ಟವಾಗುತ್ತದೆ. ಇಂದಿಗೂ ಹಳ್ಳಿ ಹಳ್ಳಿಗಳಲ್ಲಿ ಮರಗಳ ಗುಂಪಿನಲ್ಲೋ, ಬೆಟ್ಟದ ತಲೆಯಲ್ಲೋ, ದೇವತೆಗಳ ಸ್ಥಾನಗಳು ಇರುವುದು ಕಂಡುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದಕ್ಕೆ ನಿದರ್ಶನವಾಗಿ ನಾಗಬನ, ಭೂತಸ್ಥಾನಗಳು, ಬ್ರಹ್ಮಸ್ಥಾನಗಳು ಇಂದೂ ಕಾಣಬರುತ್ತವೆ.

## ದೇವಾಲಯ

'ದೇವಸ್ಯ ದೇವಾನಾಂ ವಾ ಆಲಯಃ'— ದೇವಾಲಯ ಶಬ್ದದ ವ್ಯುತ್ಪತ್ತಿ ಹೀಗಿದೆ. ದೇವತೆಯ ಅಥವಾ ದೇವತೆಗಳ ನಿವಾಸಸ್ಥಾನ. ಎಲ್ಲಿ ದೇವತೆಯ ಯಾವುದಾದರೂ ಮೂರ್ತಿ ಅಥವಾ ಪ್ರತೀಕ ಸ್ಥಾಪಿಸಿದೆಯೋ, ವಾಸ್ತು ಇದೆಯೋ ಅದನ್ನು ದೇವಾಲಯವೆಂದು ಕರೆಯುತ್ತಾರೆ. ದೇವಾಲಯವು ಕೇವಲ ಪರಮೇಶ್ವರನ ನಿವಾಸ ಸ್ಥಾನವೇ ಅಲ್ಲ, ಅದಾದರೋ ಪರಮಾತ್ಮನ ಶರೀರವೇ ಆಗಿವೆ, ಎಂದು ಅಗ್ನಿಪುರಾಣದಲ್ಲಿ ಹೇಳಿದೆ : **ಏವಮೇಷ ಹರಿಃ ಸಾಕ್ಷಾತ್ ಪ್ರಸಾದತ್ವೇನ ಸಂಸ್ಥಿತಃ** | ಅರ್ಥಾತ್, ಈ ಪ್ರಕಾರ ಸಾಕ್ಷಾತ್ ಶ್ರೀಹರಿಯು (ಪರಮಾತ್ಮನು) ಪ್ರಸಾದ(ಮಂದಿರ)ದ ರೂಪದಿಂದ ನೆಲೆಸಿದ್ದಾನೆ ಎಂದು ತಿಳಿಯಬೇಕು. ಇದೇ ಮುಂದೆ ಬೆಳೆದು ಶರೀರದ ಪ್ರತೀಕವಾದ ದೇವಾಲಯದಲ್ಲಿ ಅವಯವ ವಿಭಾಗದ ಕಲ್ಪನೆ ಮಾಡಲಾಯಿತು.

**ಶಿಖರಂ ಶಿರ ಇತ್ಯಾಹುರ್ಗರ್ಭಗೇಹಂ ಗಲಸ್ತಥಾ |**
**ಮಂಡಪಂ ಕುಕ್ಷಿರಿತ್ಯಾಹುಃ ಪ್ರಾಕಾರಂ ಜಾನು ಜಂಘಕಮ್ ||**
**ಗೋಪುರಂ ಪಾದ ಇತ್ಯಾಹುರ್ಧ್ವಜೋ ಜೀವನಮುಚ್ಯತೇ |**


“ದೇವಾಲಯದ ಶಿಖರ ಶಿರವಾಗಿದೆ, ಗರ್ಭಗೃಹ ಕಂಠ, ಮಂಡಪ ಕುಕ್ಷಿಗಳು, ಪ್ರಾಕಾರ ತೊಡೆಗಳು, ಗೋಪುರ ಪಾದ, ಧ್ವಜವು ಆ ಶರೀರದಲ್ಲಿರುವ ಜೀವನವಾಗಿದೆ”ಎಂದು ಅಗ್ನಿಪುರಾಣದಲ್ಲಿ ಹೇಳಿದೆ.

## ದೇವಾಲಯದ ವಿವಿಧ ಶೈಲಿಗಳು

ಶಿಲ್ಪಶಾಸ್ತ್ರದಲ್ಲಿ ಸಾಮಾನ್ಯವಾಗಿ ದೇವಾಲಯದ ಮೂರು ಪದ್ಧತಿಗಳನ್ನು ಅಥವಾ ಶೈಲಿಗಳನ್ನು ಮಾನ್ಯಮಾಡಿವೆ. ನಾಗರ, ದ್ರಾವಿಡ ಮತ್ತು ವೇಸರ ಎಂದು ಅದರ ಹೆಸರು.

**ನಾಗರ ಶೈಲಿ:** ನಗರ, ಈ ಶಬ್ದದಿಂದ ನಾಗರ ಶಬ್ದ ಉಂಟಾಗಿದೆ. ಇದರ ಸಂಬಂಧ ಪುರ ಅಥವಾ ನಗರ ಇವುಗಳೊಂದಿಗಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ನಗರ ನಿರ್ಮಿತಿಗಾಗಿ ದೇವಾಲಯದ ವಿಚಾರ ಹೇಳಿದ್ದು, ಯಾವ ದೇವತೆಯ ದೇವಾಲಯ ನಗರದ ಯಾವ ದಿಕ್ಕಿಗೆ ಇರಬೇಕೆಂಬುದನ್ನು ಹೇಳಿದ್ದಾನೆ. ದೇವಾಲಯದ ರಚನೆ ಮೊಟ್ಟಮೊದಲು ನಗರ ನಿರ್ಮಿತಿಯ ಆನುಷಂಗಿಕವಾಗಿ ಆದುದರಿಂದ ಈ ಪದ್ಧತಿಗೆ ನಾಗರವೆಂದು ಹೇಳಿದುದರ ಶಕ್ಯತೆ ಇದೆ. ನಾಗರ ಶೈಲಿಯಲ್ಲಿ ಅನೇಕ ಒಳಭೇದಗಳಿವೆ. ಭಾರತದಲ್ಲಿ ಬೃಹತ್ಸಂಹಿತೆಯ ಕಾಲದಿಂದ (ಕ್ರಿ.ಶ. ೫-೬ನೇ ಶತಮಾನ) ಅಥವಾ ಅದಕ್ಕಿಂತ ಹಿಂದಿನಿಂದಲೂ ನಾಗರ ಶೈಲಿಯ ಮಂದಿರಗಳ ನಿರ್ಮಿತಿ ಹೆಚ್ಚು ಪ್ರಮಾಣದಲ್ಲಿ ಆದುದು ಕಂಡುಬರುತ್ತದೆ. ನಾಗರ ಶೈಲಿಯ ದೇವಾಲಯದ ಗರ್ಭಗುಡಿಯ ಮೇಲೆಯೇ ಎತ್ತರವಾದ ಗೋಪುರವಿರುತ್ತದೆ ಮತ್ತು ಅದು ವಕ್ರರೇಖಾ ಕೃತಿಯನ್ನು ಹೊಂದಿರುತ್ತದೆ. ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ದ್ರಾವಿಡ ಶೈಲಿಯಲ್ಲಿ ಗೋಪುರವು ಛಿನ್ನಾಗ್ರ ಪಿರಮಿಡ್ಡಿನಂತೆ ಕಾಣುತ್ತದೆ ಮತ್ತು ದೇವಾಲಯದ ಮಹಾದ್ವಾರದಲ್ಲಿರುತ್ತದೆ. ಇವೆರಡರ ಲಕ್ಷಣಗಳನ್ನೂ ಹೊಂದಿರುವ ವೇಸರವು ಮೂರನೆಯ ಶೈಲಿ. ಇದು ಪ್ರಧಾನವಾಗಿ ಹೊಯ್ಸಳರ ಶೈಲಿ.

ರಾಮಾಯಣ-ಭಾರತಾದಿಗಳಲ್ಲಿ ದೇವಸ್ಥಾನದ ಉಲ್ಲೇಖವಿದ್ದರೂ ದೇವಾಲಯದ ಉಲ್ಲೇಖ ದೊರೆಯುವುದಿಲ್ಲ. ಬುದ್ಧಕಾಲದಲ್ಲಿ ಸ್ಥಾಪನೆಗೊಂಡ ಸ್ತೂಪಗಳ, ಮಠಗಳ(ವಿಹಾರ) ಮಾದರಿಯಲ್ಲಿಯೆ ಮುಂದೆ ದೇವಾಲಯಗಳು ರೂಪುಗೊಂಡವು. ದೇವಾಲಯದ ನಿರ್ಮಿತಿಯ ಬಗ್ಗೆ ಶಿಲ್ಪಶಾಸ್ತ್ರ, ಆಗಮಗ್ರಂಥಗಳಲ್ಲಿ, ಕೆಲವು ಪುರಾಣಗಳಲ್ಲಿಯೂ ವಿವರಗಳು ಹೇರಳವಾಗಿ ದೊರೆಯುತ್ತವೆ. ದೇವಾಲಯದಲ್ಲಿ ಆ ಶಬ್ದದಂತೆ ವಾಸ್ತುಶಿಲ್ಪದ ಬಾಹುಳ್ಯ ಕಂಡುಬರುತ್ತದೆ. ಅಲ್ಲಿರುವ ಗರ್ಭಗೃಹ, ತೀರ್ಥಮಂಟಪ, ಒಳಪ್ರಾಕಾರ, ಧ್ವಜಸ್ತಂಭ, ಹೊರಪ್ರಾಕಾರ, ರಥಬೀದಿ, ದೇವಾಲಯದ ಸುತ್ತಲೂ ಇರುವ ಪೌಳಿಗಳು ಮುಂತಾಗಿ ಶಿಲ್ಪಶಾಸ್ತ್ರಕ್ಕನುಸಾರವೇ ರಚಿಸಲಾಗುತ್ತವೆ. ಅಂದು ಊರಿನಲ್ಲಿ ದೇವಾಲಯ ಎತ್ತರವಾಗಿದ್ದು, ಊರಮನೆಗಳು ಅದಕ್ಕಿಂತ ತಗ್ಗಿರಬೇಕೆಂಬ ನಿಯಮವಿತ್ತು. ಎತ್ತರದ ಮಹಡಿಮನೆ ಯಾರಾದರೂ ಕಟ್ಟಬೇಕಿದ್ದರೆ, ಮೊದಲು ದೇವಾಲಯವನ್ನು ಎತ್ತರವಾಗಿಸಿ, ನಂತರ ಕಟ್ಟಬೇಕಾಗಿತ್ತು. ದೇವಾಲಯದಲ್ಲಿ ನಡೆಯುವ ಉತ್ಸವ, ರಥೋತ್ಸವ, ನಿತ್ಯಬಲಿ, ತ್ರಿಕಾಲಪೂಜೆ, ನೈವೇದ್ಯ, ಬಲಿ ಮುಂತಾದವುಗಳು ಸಾಧಾರಣವಾಗಿ ಆಗಮ ಪದ್ಧತಿಯಂತೇ ನಡೆಯುತ್ತವೆ. ವೈದಿಕ ಕಾಲದ ನಂತರ ಆಗಮರಚನೆಯ ಕಾಲದಿಂದಲೇ ದೇವಾಲಯಗಳು ಅಸ್ತಿತ್ವಕ್ಕೆ ಬಂದಿರಬಹುದೆಂದು ಅನುಮಾನಿಸಲಾಗುತ್ತದೆ. ಅಲ್ಲಿ ನಡೆಯುವ ಪ್ರತಿಯೊಂದು ಪೂಜಾ ಪದ್ಧತಿ, ಪರ್ವಗಳು ಆಯಾಯಾ ದೇವತೆಯ ಆಗಮ ಶಾಸ್ತ್ರದಂತೇ ನಡೆಯುತ್ತವೆ. ಹಾಗೆಯೇ ಮಂದಿರಗಳೂ ಬೇರೆಯೇ ಆಗಿವೆ. ಇದಕ್ಕೆ ಆಗಮಶಾಸ್ತ್ರದ ಕಟ್ಟುಪಾಡುಗಳು ಇಲ್ಲದೆ ಕೇವಲ ಭಕ್ತಿಯ ಕೇಂದ್ರಗಳಾಗುತ್ತವೆ. ರಾಮಮಂದಿರ, ಭಜನಾಮಂದಿರ ಇತ್ಯಾದಿ.


ಪುರಿಯ ಜಗನ್ನಾಥ ಮಂದಿರ (ನಾಗರ ಶೈಲಿ)

ಮಠ ದೇವಾಲಯವು ವಿದ್ಯಾಕೇಂದ್ರಗಳೇ ಹಿಂದಿನ ಕಾಲದಲ್ಲಿ ಮಠ-ದೇವಾಲಯ ಒಂದೇ ಆಗಿತ್ತು, ಮಠವೇ ಪಾಠಶಾಲೆಯಾಗಿತ್ತು. ಕೆಲವು ವರ್ಷಗಳ ಹಿಂದಿನವರೆಗೂ ‘ಕಲಿಯಲು ಮಠಕ್ಕೆ ಹೋಗಿದ್ದಾನೆ’ ಎಂಬ ಮಾತು ರೂಢಿಯಲ್ಲಿತ್ತು. ಪ್ರಾಚೀನ ಕಾಲದ ಋಷ್ಯಾಶ್ರಮದ ಗುರುಕುಲ ಪದ್ಧತಿಯೇ ನಗರದ ಮಠ-ದೇವಾಲಯದಲ್ಲಿ ನಡೆಯುತ್ತಿತ್ತು. ಸಣ್ಣ-ಸಣ್ಣ ಹಳ್ಳಿಗಳಲ್ಲಿ ದೇವಾಲಯದ ಅರ್ಚಕರೇ (ಅಯ್ಯನವರು) ಗುರುಗಳಾಗಿದ್ದರು. ಊರಿನ ಹುಡುಗರು ದೇವರ ಸೇವೆ, ಆರಾಧನೆ ಮತ್ತು ವಿದ್ಯಾಭ್ಯಾಸ ಜೊತೆ-ಜೊತೆಯಲ್ಲಿಯೇ ಮಾಡುತ್ತಿದ್ದರು. ವರ್ಣಾಶ್ರಮಕ್ಕನುಸಾರ ಅವರಿಗೆ ಬೇಕಾದ ವಿದ್ಯೆ ಈ ಮಠ-ದೇವಾಲಯದಿಂದಲೇ ದೊರೆಯುತ್ತಿತ್ತು. ಈ ಸಂಪ್ರದಾಯ ದೊಡ್ಡ-ದೊಡ್ಡ ಮಠಗಳಲ್ಲಿಯೂ ನೋಡಬಹುದು. ಶ್ರೀಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕೂ ಮಠಗಳು ದೇವಾಲಯಗಳೇ ಆಗಿವೆ. ಕಾಲಾಂತರದಲ್ಲಿ ಮಠ-ದೇವಾಲಯಗಳಲ್ಲಿ ಅಂತರವುಂಟಾಗುತ್ತಾ ಮಠ ಬೇರೆ, ದೇವಾಲಯ ಬೇರೆ ಆದುವು. ದೇವಾಲಯಗಳು ವಿದ್ಯಾಲಯವಾಗಿರದೆ ಕೇವಲ ಆರಾಧನಾ, ಸಮಾರಾಧನೆಯ ಕೇಂದ್ರಗಳಾದವು. ಮಠಗಳು ಕೇವಲ ಅಲ್ಲಿಯ ಮಹಂತರ (ಸ್ವಾಮಿಗಳ) ಪ್ರಮುಖ ಸ್ಥಾನಗಳಾದವು. ಹಾಗೆಯೇ ಗುರುಗಳಾದ ಅರ್ಚಕರು ವೃತ್ತಿನಿರತ ಪೂಜಾರಿಗಳಾದರು.

## ದೇವಾಲಯ ಸಾಂಸ್ಕೃತಿಕ ಕೇಂದ್ರ

ಭಾರತೀಯ ಸನಾತನ ಸಂಸ್ಕೃತಿಯ ರಕ್ಷಣೆಯಲ್ಲಿ ದೇವಾಲಯದ ಪಾತ್ರ ತುಂಬಾ ಹಿರಿದು. ಊರಿನ ಜನರಿಗೆ ಸಾಂಸ್ಕೃತಿಕ-

ಭೌದ್ಧಿಕ ಶಿಕ್ಷಣ ದೇವಾಲಯಗಳಿಂದ ದೊರೆಯುತ್ತಿತ್ತು. ಹಬ್ಬ, ಹರಿದಿನ, ಪರ್ವದಿನಗಳಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ, ಉತ್ಸವ ಇರುತ್ತಿತ್ತು. ಊರಿನ ಎಲ್ಲ ಜನರು ಅದರಲ್ಲಿ ಭಾಗವಹಿಸುತ್ತಿದ್ದರು. ಅದರಿಂದ ಜನ-ಜೀವನದಲ್ಲಿ ಹಬ್ಬ ಹರಿದಿನಗಳು ಎಂದೂ ಮರೆಯದೆ ಅವುಗಳ ಆಚರಣೆ ದೇವಾಲಯದಂತೆ ಮನೆ-ಮನೆಗಳಲ್ಲಿಯೂ ನಡೆಯುತ್ತಿದ್ದವು. ಯುಗಾದಿಯ ಪಂಚಾಂಗ ಶ್ರವಣ, ವಿಜಯದಶಮಿಯ ಬನ್ನಿಉತ್ಸವ, ನವರಾತ್ರಿಗಳು, ಶಿವರಾತ್ರಿ, ಏಕಾದಶಿಗಳು ಹೀಗೆ ಎಲ್ಲವೂ ದೇವಾಲಯದಲ್ಲಿ ನಡೆಯುತ್ತಿದ್ದರಿಂದ ಜನರಲ್ಲಿಯೂ ಅವುಗಳು ಅಚ್ಚೊತ್ತಲ್ಪಟ್ಟವು. 'ಅರ್ಚಕರೆ! ಏಕಾದಶೀ ಯಾವಾಗ? ಸಂಕಷ್ಟ ಯಾವಾಗ? ಇಂದು ಯಾವ ತಿಥಿ, ಗ್ರಹಣ ಯಾವಾಗ?' ಎಂದು ಮುಂತಾಗಿ ಕೇಳಿ ತಿಳಿಯುತ್ತಿದ್ದರು.



**ಸೋಮನಾಥಪುರದ ಚೆನ್ನಕೇಶವ ದೇವಾಲಯ ( ಹೊಯ್ಸಳ ಶೈಲಿ)**

ದೇವಾಲಯದಲ್ಲಿ ನಡೆಯುವ ನಿತ್ಯೋತ್ಸವವು ಒಂದೊಂದು ದಿನ ಒಂದೊಂದು ಬೀದಿಯಲ್ಲಿ ಬರುತ್ತಿತ್ತು. ನಮ್ಮ ಬೀದಿಗೆ ಇಂದು ದೇವರು ಬರುತ್ತಾರೆಂದು ಆ ಬೀದಿಯ ಜನರು ಗುಡಿಸಿ, ಸಾರಿಸಿ ಶುದ್ಧಗೊಳಿಸಿ, ಮನೆಯ ಮುಂದೆ ರಂಗವಲ್ಲಿ ಹಾಕಿ, ದೇವರು ಬಂದಾಗ ಮನೆಯ ಮುಂದೆ ದೀಪ ಬೆಳಗಿ ದೇವರ ಸ್ವಾಗತಕ್ಕೆ ಸಿದ್ಧರಾಗಿ ನಿಲ್ಲುತ್ತಿದ್ದರು. ದೇವರಿಗೆ ಹಣ್ಣುಕಾಯಿ, ಆರತಿ ನೀಡಿ, ದೇವರ ಆಶೀರ್ವಾದ, ಕೃಪೆ ಪಡೆಯುತ್ತಿದ್ದರು. ಇದರಿಂದ ಊರಿಗೆ ಊರೇ ಸ್ವಚ್ಛವಾಗಿ, ರೋಗರುಜಿನಗಳು ಬಳಿ ಬರುತ್ತಿರಲಿಲ್ಲ. ದೇವಾಲಯದಲ್ಲಿ ನಡೆಯುವ ತ್ರಿಕಾಲ ಪೂಜೆಯ ಸಮಯದಲ್ಲಿ ನುಡಿಸುವ ಗಂಟೆ, ಜಾಗಟೆ, ನಗಾರಿ, ಚಂಡೆಯ ಶಬ್ದದಿಂದ ಊರಿನ ಜನರು ಮನೆಯಲ್ಲೇ ದೇವರನ್ನು ನೆನೆದು ಕೈ ಮುಗಿಯುತ್ತಿದ್ದರು. ಇದರಿಂದ ದೇವರ ಸ್ಮರಣೆ ಸದಾಕಾಲ ಅವರಿಗಾಗುತ್ತಿತ್ತು.

ದೇವಾಲಯದಲ್ಲಿ ನಡೆಯುವ ವರ್ಷಾವಧಿ ಜಾತ್ರೆಯಲ್ಲಿ, ರಥೋತ್ಸವದಲ್ಲಿ, ನಿತ್ಯವೂ ಕೂಡ ಸಮಾಜದ ಎಲ್ಲ ಜಾತಿ-ವರ್ಗದವರಿಗೂ ಒಂದೊಂದು ಉಪಾಧಿ, ದೇವರ ಕೈಂಕರ್ಯ ಇರುತ್ತಿತ್ತು. ಎಲ್ಲ ವರ್ಗದ ಜನರಿಗೂ ದೇವರ ಸೇವೆಯ ಅವಕಾಶವಿತ್ತು, ಸಮಾಜದ ಯಾವುದೇ ವರ್ಗವೂ ಹೊರಗುಳಿಯುತ್ತಿರಲಿಲ್ಲ. ಇದರಿಂದ ಸಮಾಜದಲ್ಲಿ ವರ್ಗಭೇದವೇ ಇರುತ್ತಿರಲಿಲ್ಲ, ಎಲ್ಲರೂ ಸಾಮರಸ್ಯದಿಂದ ಬಾಳುತ್ತಿದ್ದರು.

ಊರಿನಲ್ಲಿ ಏನಾದರೂ ನ್ಯಾಯತೀರ್ಮಾನವಾಗಬೇಕಾದರೆ ಪಂಚರು ದೇವಾಲಯದಲ್ಲಿ ಸೇರಿ ನ್ಯಾಯ ತೀರ್ಮಾನಿಸುತ್ತಿದ್ದರು. ಪರಮಾತ್ಮನ ಸನ್ನಿಧಿಯ ವಿಶೇಷತೆಯಿಂದ ನ್ಯಾಯವೂ ಸರಿಯಾಗಿಯೆ ಇರುತ್ತಿತ್ತು. ದೇವಾಲಯದ ಸಂಬಂಧ ದೂರವಾದಾಗಿನಿಂದ ನಡೆಯುವ ಪಂಚಾಯಿತಿಗಳು ಎಷ್ಟು ನ್ಯಾಯಸಮ್ಮತವೋ ದೇವರೇ ಬಲ್ಲ!

ಅಂದು ದೇವಾಲಯಗಳು ಸಾಂಸ್ಕೃತಿಕ ಕೇಂದ್ರದಂತೆ ಕಲಾ ಕೇಂದ್ರಗಳೂ ಆಗಿದ್ದುವು. ಸಂಗೀತ, ನೃತ್ಯ, ಹರಿಕಥೆ, ಗಮಕ, ಯಕ್ಷಗಾನ, ಜಾನಪದ ಎಲ್ಲವೂ ದೇವಾಲಯದಲ್ಲೇ ನಡೆಯುತ್ತಿದ್ದುವು. ಪ್ರತಿದಿನ ದೇವಾಲಯದಲ್ಲಿ ಪುರಾಣವಾಚನ, ಗಮಕವಾಚನ, ಹರಿಕಥೆ ನಡೆಯುತ್ತಿದ್ದು, ಊರಿನ ಜನರಿಗೆ ಇದೊಂದು ದೊಡ್ಡ ಶಿಕ್ಷಣ ಮಾಧ್ಯಮವೂ ಆಗಿರುತ್ತಿತ್ತು. ದಿನವಿಡೀ ದುಡಿದು ಶಾರೀರಿಕ ದಣಿವನ್ನು ತಣಿಸಿ, ಮನಸ್ಸಿಗೆ ಉಲ್ಲಾಸ-ಸಂಸ್ಕಾರ ಕೊಡುವಂತಹ ಕಲೆಗಳ ಪ್ರಯೋಗಗಳು ದೇವಾಲಯದಲ್ಲಿ ಪ್ರತಿದಿನ ನಡೆಯುತ್ತಿದ್ದುವು. ವಾಸ್ತವವಾಗಿ ಎಲ್ಲ ಕಲೆಗಳು ಭಗವದಾರಾಧನೆಯೇ ಆಗಿವೆ. ಅವು ಆರಾಧನೆಯ ರೂಪದಲ್ಲಿ ಪ್ರಕಟಗೊಂಡಾಗ ಅದರಲ್ಲಿ ದೈವಿಕತೆ, ಪಾವಿತ್ರ್ಯತೆ ಇರುತ್ತದೆ. ಹಿಂದಿನ ಕಾಲದಲ್ಲಿ ಎಲ್ಲಾ ಕಲಾಪ್ರಕಾರಗಳು ದೇವರ ಆರಾಧನೆಗಾಗಿಯೇ ಮೀಸಲಿರುತ್ತದ್ದವು. ಇಂದೂ ಕೂಡ ನೃತ್ಯಪ್ರಕಾರಗಳಲ್ಲಿ 'ದೇವಾಲಯ ನೃತ್ಯ'ವೇ ಪ್ರಾಮುಖ್ಯ ಪಡೆದಿದೆ. ದೇವಾಲಯದ, ದೇವರ ಸಂಬಂಧ ಕಡಿದುಹೋಗಿ ವಿಲಾಸೀ ರಾಜರ ಮೆಚ್ಚುಗೆಗೆ ಕಲೆಗಳು ಪ್ರದರ್ಶನಗೊಂಡಾಗ ಅವು ತಮ್ಮ ಪಾವಿತ್ರ್ಯವನ್ನು ಕಳಕೊಂಡು ಕೇವಲ ಜನರಂಜನೆಯ ಒಂದು ಸಾಧನಮಾತ್ರವಾಗಿ ಉಳಿದಿವೆ.

> **ಧರ್ಮ ಇರುವುದು ಪ್ರೀತಿಯಲ್ಲಿ, ಬಾಹ್ಯಾಚಾರದಲ್ಲಿ ಅಲ್ಲ. ಧರ್ಮಕ್ಕೆ ಶುದ್ಧ ನಿಷ್ಕಪಟ ಹೃದಯವೇ ಮುಖ್ಯ. ಒಬ್ಬನ ದೇಹ ಮತ್ತು ಮನಸ್ಸು ಪರಿಶುದ್ಧವಿಲ್ಲದೆ ಇದ್ದರೆ ಅವನು ದೇವಾಲಯಕ್ಕೆ ಬಂದು ಪ್ರಾರ್ಥಿಸಿದರೆ ಪ್ರಯೋಜನವಿಲ್ಲ. ಪರಿಶುದ್ಧ ದೇಹ ಮತ್ತು ಮನಸ್ಸಿನಿಂದ ಪ್ರಾರ್ಥಿಸಿದರೆ ದೇವರು ಅದನ್ನು ನೆರವೇರಿಸುವನು.**
>
> **ಸ್ವಾಮಿ ವಿವೇಕಾನಂದ**

### ದೇವಾಲಯ - ವಾಸ್ತುಶಿಲ್ಪ

ದೇವಾಲಯಗಳಲ್ಲಿ ವಾಸ್ತು ಶಿಲ್ಪಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ.



ಮಧುರೈಯಲ್ಲಿರುವ ಮೀನಾಕ್ಷಿ ದೇವಾಲಯ (ದ್ರಾವಿಡ ಶೈಲಿ)

ಅದರಲ್ಲಿಯೂ ನಾಗರ, ದ್ರಾವಿಡ ಶೈಲಿಯ ದೇವಾಲಯಗಳು ವಾಸ್ತು ಶಿಲ್ಪದ ಮೂರ್ತಿಮಂತ ಸ್ಮಾರಕಗಳಾಗಿವೆ. ಕರ್ನಾಟಕದಲ್ಲಿರುವ ಬೇಲೂರು, ಹಳೇಬೀಡು ಮುಂತಾದ ಸಾವಿರಾರು ದೇವಾಲಯಗಳು ಶಿಲ್ಪಕ್ಕೆ ವಿಶ್ವಖ್ಯಾತಿ ಪಡೆದಿವೆ. ದೇವಾಲಯಶಿಲ್ಪ ಕೇವಲ ಕಲೆಯೇ ಅಲ್ಲದೆ, ನಮ್ಮ ಸಂಸ್ಕೃತಿಯ, ಪುರಾಣಗಳ ಕೈಗನ್ನಡಿಯೂ ಆಗಿದೆ. ಈ ಶಿಲ್ಪದಲ್ಲಿ ಸೌಂದರ್ಯದ ಜೊತೆಗೆ ದೀರ್ಘಕಾಲ ಬಾಳುವ ಕಡೆಗೂ, ಸಂಸ್ಕೃತಿಯ ಕಡೆಗೂ ದೃಷ್ಟಿ ಇದ್ದು ದೈವಿಕತೆ ಇದೆ. ಅದರಿಂದಲೇ ಈ ಶಿಲ್ಪಗಳು ಕಲೆಯ ಉತ್ತುಂಗ ಶಿಖರಕ್ಕೇರಿವೆ.

**ದೇವಾಲಯಗಳ ಸ್ಥಿತಿ**

ನಮ್ಮೀ ದೇವಾಲಯಗಳು ರಾಜಾಶ್ರಯವಿದ್ದ ಕಾಲದಲ್ಲಿ ಅತಿ ಶ್ರೀಮಂತವಾದುವು. ಬಂಗಾರ, ನವರತ್ನಗಳ ಭಂಡಾರಗಳೇ ಆದುವು. ವೈಭವೋಪೇತವಾಗಿ ಬೆಳಗಿದವು. ಅಗಲೇ ವಿಶಾಲವೂ, ವಿಸ್ತಾರವೂ ಆದ ದೊಡ್ಡ-ದೊಡ್ಡ ಎತ್ತರದ ದೇವಾಲಯ ಮತ್ತು ಗೋಪುರಗಳು ನಿರ್ಮಾಣಗೊಂಡವು. ರಾಜ್ಯಗಳ ವೈಭವದಂತೆ ದೇವಾಲಯಗಳ ವೈಭವಗಳು ಉತ್ತುಂಗಕ್ಕೇರಿದವು. ಆದರೆ ಭಾರತದಲ್ಲಿ ಆದ ಪರಕೀಯರ ಧಾಳಿಯಿಂದ ಇಂತಹ ಶ್ರೀಮಂತ ದೇವಾಲಯಗಳು ನೆಲಸಮವಾದುವು. ಪರಕೀಯರ ಕ್ರೌರ್ಯಕ್ಕೆ ಬಲಿಯಾದುವು. ಹೀಗೆ ದೇವಾಲಯಗಳ ಅವನತಿ ಕಾಲ ಪ್ರಾರಂಭವಾಗಿ ಅನೇಕ ದೇವಾಲಯಗಳು ನಾಮಾವಶೇಷವಾದುವು, ಉಳಿದವು ಜೀರ್ಣಾವಸ್ಥೆಗೆ ಬಂದು ಇದ್ದೂ ಇಲ್ಲದಂತಾದುವು.

ಕೆಲವು ವರ್ಷಗಳಿಂದೀಚೆಗೆ ಜನರಲ್ಲಿ ಪುನಃ ಜಾಗೃತಿಯಿಂದಲೋ, ಆಸ್ತಿಕಭಾವನೆಯಿಂದಲೋ, ಭಕ್ತಿಯಿಂದಲೋ, ಸ್ಪರ್ಧೆಯಿಂದಲೋ, ಆಡಂಬರದಿಂದಲೋ ಹೇಗೂ ಇರಲಿ ಜೀರ್ಣೋದ್ಧಾರದ ಕಾರ್ಯ ನಡೆಯುತ್ತಿರುವುದು ಸಾಮಾಜಿಕ ಸೌಖ್ಯದ ಸಂಕೇತವಾಗಿದೆ. ಜೀರ್ಣೋದ್ಧಾರಗೊಂಡ ದೇವಾಲಯಗಳು ಪುನಃ ತಮ್ಮ ಹಿಂದಿನ ವೈಭವ ಮೆರೆದು, ಸಾಂಸ್ಕೃತಿಕ ಕೇಂದ್ರಗಳಾಗಿ ಮೆರೆಯಲಿ ಎಂದು ಹಾರೈಸೋಣ, ಆಶಿಸೋಣ. ಪರಮಾತ್ಮನು ನಮ್ಮ ಹಾರೈಕೆ ನಡೆಸಲಿ.

## ಕಾಬೂಲಿಂದ ಬಂದ ಕೃಷ್ಣಭಕ್ತ

ಕಾಬೂಲ್ ನಗರದಲ್ಲಿ ಒಬ್ಬ ಸಮಗಾರನಿದ್ದ. ಅವನು ಕಡು ಬಡವ; ಆದರೆ ಧರ್ಮನಿಷ್ಠೆಯುಳ್ಳವನಾಗಿದ್ದ. ಅವನ ಹೆಸರು ರಶ್‌ಖಾನ್. ಒಂದು ಸಲ ಅವನು ಅಂಗಡಿಯೊಂದರಲ್ಲಿ ಒಂದು ಚಿತ್ರ ನೋಡಿದ. ನೋಡಿ ಮನಸೋತ. ಬೆಣ್ಣೆ ತಿನ್ನುವ ಕೃಷ್ಣನ ಚಿತ್ರ ಅದು. ಆ ಮಗುವಿನ ರೂಪಿಗೆ ಮರುಳಾದ ರಶ್‌ಖಾನ್, ಅಂಗಡಿಯವನಲ್ಲಿ ಅದರ ಬಗ್ಗೆ ವಿಚಾರಿಸಿದ. ವ್ಯಾಪಾರದಲ್ಲಿ ಮಗ್ನನಾದ ಅಂಗಡಿಯಾತ, ಭಾರತದಲ್ಲಿ, ಬೃಂದಾವನದಲ್ಲೋ ಮಥುರೆಯಲ್ಲೋ ಆ ಮಗು ಇರಬೇಕು ಎಂದ.



ರಶ್‌ಖಾನ್‌ನ ಮನಸ್ಸೆಲ್ಲ ಆ ಮಗುವೇ ತುಂಬಿಕೊಂಡಿತು. ಹೇಗಾದರೂ ಆ ಮಗುವನ್ನು ಹುಡುಕಿ ಅದರ ಪುಟ್ಟ ಪಾದಗಳಿಗೆ ಷೂ ತೊಡಿಸಬೇಕು ಎಂದುಕೊಂಡ. ಆ ಚಿತ್ರವನ್ನು ಹಿಡಿದುಕೊಂಡು ಬಹಳ ಕಷ್ಟಗಳನ್ನು ಅನುಭವಿಸಿ ಆತ ಮಥುರೆಗೆ ಬಂದ. ಜನರಲ್ಲಿ ಮಗುವಿನ ಬಗ್ಗೆ ವಿಚಾರಿಸಿದ. ಜನ ಇವನನ್ನು ಹುಚ್ಚನೆಂದು ಭಾವಿಸಿ, 'ಅವನು ದೇಗುಲಗಳಲ್ಲಿದ್ದಾನೆ' ಎಂದರು. ರಶ್‌ಖಾನ್ ದೇಗುಲಗಳಲ್ಲೆಲ್ಲ ಅಲೆದಾಡಿದ. ಆದರೆ ಯಾರೂ ಅವನನ್ನು ಒಳಗೆ ಬಿಡಲಿಲ್ಲ.

ಅನ್ನ, ನೀರು ಸೇವಿಸದೆ ಊರಿಂದೂರಿಗೆ ಅಲೆದಾಡಿದ ರಶ್‌ಖಾನ್ ಅಂದುಕೊಂಡ, 'ಈ ಚಿತ್ರದಲ್ಲಿರುವ ಮಗುವಿನ ಚೆಲುವಿಗೆ ನಾನು ಮನಸೋತೆ. ಎಲ್ಲವನ್ನೂ ಮರತೆ. ಆದರೆ ಅದರ ಪುಟ್ಟ ಪಾದಗಳಿಗೆ ಒಂದು ಜತೆ ಷೂ ಇಲ್ಲವಲ್ಲಾ?' ಅವನ ಹೃದಯದಲ್ಲಿ ಪ್ರೇಮಪ್ರವಾಹವುಕ್ಕಿ, ಕಣ್ಣೀರ ಕೋಡಿಯಾಗಿ ಹರಿಯಿತು. ಒಂದೆಡೆ ಅಸಹಾಯಕನಾಗಿ, ದೀನನಾಗಿ ಅವನು ಕುಳಿತುಕೊಂಡ. ಕೊನೆಗೂ ಅವನ ಪರಿಶುದ್ಧ ಪ್ರೀತಿಗೆ ಪ್ರತಿಫಲ ದೊರಕಿತು. ಚಿತ್ರದಲ್ಲಿರುವ ಮಗುವಿನ ರೂಪದಲ್ಲಿ ಶ್ರೀಕೃಷ್ಣ ಅವನಿಗೆ ಕಾಣಿಸಿಕೊಂಡ. ಅವನ ಹೆಗಲನ್ನು ಸ್ಪರ್ಶಿಸಿ "ಬಾ.. ನನ್ನ ಷೂಗಳೆಲ್ಲಿವೆ? ನನ್ನ ಪಾದಗಳಿಗೆ ಅವನ್ನು ತೊಡಿಸು. ಹಿಂಜರಿಯಬೇಡ. ನಾನಿಲ್ಲಿ ನಿನ್ನ ಮುಂದೆ ನಿಂತಿರುವೆ" ಎಂದ. ರಶ್‌ಖಾನ್ ಅನಂತ ಆನಂದದಲ್ಲಿ ಮುಳುಗಿದ. ಭಗವಂತ ಅವನ ಮೇಲೆ ಅನುಗ್ರಹ ಬೀರಿ ಮರೆಯಾದ.

ಈ ಮುಸ್ಲಿಂ ಸಂತ ಅನಂತರ ಶ್ರೀಕೃಷ್ಣನ ಮಹಾ ಭಕ್ತನಾದ. ಬ್ರಜಭಾಷೆಯಲ್ಲಿ ಸುಂದರವಾದ ಅನೇಕ ದ್ವಿಪದಿ ಕವಿತೆಗಳನ್ನು ಬರೆದ. ನಿರಾಕಾರ ಭಗವಂತ ಸಾಕಾರನಾಗಿ ಬರಲು ಕಾರಣವಾದ ಅವನ ಅಸೀಮ ಪ್ರೇಮ ಈ ಕವಿತೆಗಳಲ್ಲಿ ಮೂಡಿಬಂದಿವೆ. ಇಂದಿಗೂ ಭಕ್ತರು ಇವುಗಳನ್ನು ಹಾಡುತ್ತಾರೆ. ಗಾಢ ಪ್ರೇಮವಿರುವಲ್ಲಿ ಜಾತಿ, ಕುಲ, ಧರ್ಮ ಯಾವುದು ತಡೆಯಾಗಲಾರದು. (*ಸಮಿತ್, ಸೆಪ್ಟೆಂಬರ್ ೨೦೦೬, ಆಂಗ್ಲ ಪತ್ರಿಕೆಯಿಂದ*)